ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ

ಸುತ್ತೂರು, ನಂಜನಗೂಡು ತಾ॥ ಮೈಸೂರು ಜಿಲ್ಲೆ॥

# ಅಷ್ಟಾವರಣದ ಆಚರಣೆ – ಮಾನಸಿಕ ಸದೃಢತೆ

**ಸುತ್ತೂರು, ಆಗಸ್ಟ್–3:** ಅಷ್ಟಾವರಣದ ಆಚರಣೆಯಿಂದ ಮಾನಸಿಕ ಸದೃಢತೆಯನ್ನು ಪಡೆದು ಸನ್ಮಾರ್ಗದಲ್ಲಿ ನಡೆಯಲು ಸಾಧ್ಯ ಎಂದು ಮೈಸೂರು ಜೆಎಸ್‌ಎಸ್ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಶ್ರೀ ಹೆಚ್. ಬಿ ದೇವಣ್ಣನವರು ಆಗಸ್ಟ್ 3 ರಂದು ಸುತ್ತೂರು ಶ್ರೀ ಮಠದಲ್ಲಿ ಶ್ರಾವಣ ಮಾಸದ 6ನೇ ದಿನದ ಪ್ರವಚನದಲ್ಲಿ ಮಾತನಾಡುತ್ತಾ ತಿಳಿಸಿದರು.

ದೇವರಿಂದ ನಿರ್ಮಿತವಾದ ಜಗತ್ತು ಶಕ್ತಿ ಸ್ವರೂಪಿಯಾಗಿದೆ. ಮಾನವರೆಲ್ಲರೂ ಶಕ್ತಿ ಸ್ವರೂಪಿಗಳಾಗಿದ್ದಾರೆ. ಅಷ್ಟಾವರಣಗಳ ಆಚರಣೆ ಮಹತ್ವದ್ದಾಗಿದೆ. ಅಷ್ಟಾವರಣಗಳಾದ ಗುರು, ಲಿಂಗ, ಜಂಗಮ, ಪಾದೋಧಕ, ಪ್ರಸಾದ, ವಿಭೂತಿರುದ್ರಾಕ್ಷಿ ಹಾಗೂ ಮಂತ್ರ ಇವುಗಳ ಆಚರಣೆಯಿಂದ ಶಕ್ತಿ ಸಂಚಲನವಾಗುವುದು. ಅಷ್ಟಾವರಣದಲ್ಲಿ ಗುರುವಿಗೆ ಪ್ರಥಮ ಸ್ಥಾನವಿದೆ. ಗುರುವಿದ್ದರೆ ಲಿಂಗ, ಲಿಂಗವಿದ್ದರೆ ಜಂಗಮ. ಅಜ್ಞಾನದ ಕಣ್ಣಿಗೆ ಜ್ಞಾನವೆಂಬ ಅಂಜನವನಿಟ್ಟು ಸನ್ಮಾರ್ಗಕ್ಕೆ ಕರೆದುಕೊಂಡು ಹೊಗುವವನೇ ಗುರು. ಮೀನು, ಆಮೆ, ಪಕ್ಷಿಗಳಿಗಿರುವ ಶಕ್ತಿ ಗುರುವಿನಲ್ಲಿ ಕಾಣಬಹುದು. ಅಕ್ಷರಾಭ್ಯಾಸ ಮಾಡಿಸುವವನು ಗುರು, ಆಧ್ಯಾತ್ಮದ ಜ್ಞಾನವನ್ನು ನೀಡುವವನು ಪರಮಗುರು. ಗುರುವಿನಿಂದ ಜ್ಞಾನವನ್ನು ಪಡೆಯುವ ಸಂದರ್ಭದಲ್ಲಿ ಎಷ್ಟು ಪಡೆಯಲು ಸಾಧ್ಯವೋ ಅಷ್ಟು ಪಡೆಯಬೇಕು. ಅವಕಾಶ ದೊರೆತಾಗ ಒಳ್ಳೆಯ ಸೇವೆ ಮಾಡಬೇಕು, ತಂದೆ–ತಾಯಿಗಳು ಮಕ್ಕಳನ್ನು ಪ್ರೀತಿಯಿಂದ ನೋಡಬೇಕು, ಮಕ್ಕಳು ಸಹ ತಂದೆ–ತಾಯಿಗಳ ಸೇವೆಯನ್ನು ನಿರಂತರವಾಗಿ ಮಾಡಬೇಕು. ಸಮಾಜ ಸೇವಕರು ಸ್ಥಾನಮಾನಗಳು ದೊರೆತಾಗ ಜನಸೇವೆಯನ್ನು ಮಾಡಬೇಕು. ದೊರೆಯುವ ಸದುಪಯೋಗ ಮಾಡಿಕೊಳ್ಳಬೇಕು. ಇದುವೇ ಜೀವನ ಸತ್ಯ.

ಈಶ ಕಾರುಣ್ಯವನ್ನು ಪಡೆಯ ಬಯಸುವವನು ತನ್ನಲ್ಲಿರುವ ಧನ, ಕನಕ, ವಸ್ತು, ವಾಹನ, ವಸ್ತ್ರಗಳನ್ನು ಕೊಟ್ಟರೆ ಸಾಲದು, ಪತ್ನಿ ಪುತ್ರರನ್ನು ಕೊಟ್ಟರೂ ಸಾಲದು, ತನ್ನನ್ನೂ, ತನ್ನ ಬುದ್ದಿ, ಮನ, ಚಿತ್ತ, ಅಹಂಕಾರಗಳನ್ನು ಶಿವನಿಗರ್ಪಿಸಿ ತಾನು ಇಲ್ಲವಾಗಬೇಕು. ಅಮರನೀತಿ ಎಲ್ಲಿಯವರೆಗೆ ತನ್ನ ಅಹಂಕಾರವನ್ನು ಅಳಿದು ತಕ್ಕಡಿ ಏರುವುದಿಲ್ಲವೋ ಅಲ್ಲಿಯವರೆಗೆ ತಕ್ಕಡಿ ಹಾಗೆ ಇರುತ್ತದೆ. ಅಹಂಕಾರ ಅಳಿದು ತಾನು ಇಲ್ಲವಾಗಿ ತಕ್ಕಡಿ ಏರುತ್ತಿದ್ದಂತೆಯೇ ಅದು ಸಮನಾಗಿ ನಿಲ್ಲುತ್ತದೆ. ಅಂತಿಮವಾಗಿ ಭಕ್ತ ಮತ್ತು ಶಿವ ಇಬ್ಬರೂ ಒಂದೇ ಎಂಬ ಭಾವ ಮೂಡುತ್ತದೆ ಎಂದು ಉದಾಹರಣೆಯೊಂದಿಗೆ ತಿಳಿಸಿದರು.

ವೀರಶೈವ ಭಕ್ತಮಂಡಳಿ ಸೇವಾರ್ಥ ನೆರವೇರಿಸಿದರು. ಸಾಮೂಹಿಕ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಭಕ್ತಾದಿಗಳು ಮತ್ತು ಆಧ್ಯಾತ್ಮಿಕ ಜಿಜ್ಞಾಸುಗಳು ಪಾಲ್ಗೊಂಡಿದ್ದರು.